ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು):

ಸಮಾಜ ಕಲ್ಯಾಣ ಇಲಾಖೆ (ಪ.ಜಾತಿ : ಪ.ವರ್ಗ)

1995-96ನೇ ಸಾಲಿನಲ್ಲಿ 40 ಮೆಟ್ರಿಕ್‌ಪೂರ್ವ ಹಾಗೂ 39 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಬಿ.ಸಿ.ಎಂ. ಇಲಾಖೆ:

1995-96ನೇ ಸಾಲಿನಲ್ಲಿ 50 ಮೆಟ್ರಿಕ್‌ಪೂರ್ವ ಮತ್ತು 25 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ವಿಷಯ : ಹಿಂದುಳಿದ ವರ್ಗಗಳ ಮೀಸಲಾತಿ ಜಾರಿಗೆ ನಿಯಮಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 753(726)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯ ಕುರಿತಾಗಿ ಜಾರಿ ಮೀಸಲಾತಿಯ ಕುರಿತಾಗಿ ಜಾರಿಯಲ್ಲಿರುವ ನಿಯಮಗಳೇನು;

ಆ. ಪ್ರಸಕ್ತ ವರ್ಷದಲ್ಲಿ ವೃತ್ತಿ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಈ ಆದೇಶವನ್ನು ಜಾರಿಗೊಳಿಸಲಾಗಿದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು):

ಅ. ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕುರಿತಂತೆ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶವನ್ನು ಪಡೆಯಲು ಭಾರತ ಸಂವಿಧಾನದ ಅನುಚ್ಛೇದ 5(4)ರ ಮೇರೆಗೆ (1994-95ನೇ ಸಾಲಿಗೆ) ಸರ್ಕಾರಿ ಆದೇಶ ಸಂಖ್ಯೆ ಸಕಇ 150 ಬಿಸಿಎ 94 ದಿನಾಂಕ: 17-9-94 ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿಗೆ ಭಾರತ ಸಂವಿಧಾನದ ಅನುಚ್ಛೇದ 16(4) ರ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ ನಕಇ 251 ಬಿಸಿಎ 94 ದಿನಾಂಕ : 31-1-1995 (31-5-1995 ರವರೆಗೆ)ಗಳಲ್ಲಿ ಹೊರಡಿಸಿರುವಂತೆ ನಿಯಮಗಳು ಜಾರಿಯಲ್ಲಿರುತ್ತದೆ.

ಆ. ಪ್ರಸಕ್ತ ವರ್ಷದಲ್ಲಿ (ಅಂದರೆ 1994-95ನೇ ಸಾಲಿಗೆ ವೃತ್ತಿ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಭಾರತ ಸಂವಿಧಾನದ ಅನುಚ್ಛೇದ 15(4) ಮೇರೆಗೆ ಆದೇಶ ಸಂಖ್ಯೆ ಸಕಇ 150 ಬಿಸಿಎ 94 ದಿನಾಂಕ : 17-9-1994 ಜಾರಿಯಲ್ಲಿದೆ.

ವಿಷಯ : ಸೂರತ್ಕಲ್‌ನಗರದ ಮಧ್ಯದಲ್ಲಿರುವ ಹೊಟೆಲ್‌ಗಳ ಕಲ್ಮಶ ನೀರು ಜನರು ನಡೆದಾಡುವ ರಸ್ತೆಯಲ್ಲಿ ಹರಿಯುತ್ತಿರುವುದರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 754(1024)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸೂರತ್ಕಲ್) ಮಾನ್ಯ ನಗರಾಭಿವೃದ್ಧಿ ಮತ್ತು ಕಾಡಾ ಕರ್ನಾಟಕ ಹೈದರಾಬಾದ್ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಸೂರತ್ಕಲ್ ನಗರದ ಮಧ್ಯದಲ್ಲಿರುವ ಹೋಟೆಲ್‌ಗಳ ಕಲ್ಮಶ ನೀರು ಜನರು ನಡೆದಾಡುವ ರಸ್ತೆಗಳಲ್ಲಿ ಹರಿಯುತ್ತಿರುವ ಬಗ್ಗೆ ದೂರು ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ, ಈ ವಿಷಯದ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಮತ್ತು ಕಾಡಾ ಕರ್ನಾಟಕ ಹೈದರಾಬಾದ್ ಅಭಿವೃದ್ಧಿ ಮಂಡಳಿ ಸಚಿವರು) :

ಅ. ಬಂದಿದೆ.

ಆ. ದಕ್ಷಿಣ ಕನ್ನಡ ಜಿಲ್ಲಾ 3ನೇ ಮುನ್ಸಿಫ್ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ 132: 92 ರ ಬಾಕಿಯಿದೆ ಅಲ್ಲದೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ 1709 ಮತ್ತು 1710:90 ಬಾಕಿಯಿವೆ.

ಆದರೆ ಸೂರತ್ಕಲ್ ಪುರಸಭೆಯ ಒಳಚರಂಡಿ ಯೋಜನೆಯ ವ್ಯವಸ್ಥೆಗಾಗಿ ರೂ. 385.00 ಲಕ್ಷ ರೂಪಾಯಿಗಳ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ತಯಾರಿಸಿದೆ. ಇದು ಪರಿಶೀಲನೆಯಲ್ಲಿದೆ. ಈ ಮೇಲಿನ ಹೋಟೆಲ್‌ಗಳ ಪರವಾನಗಿಗಳು 31-3-95ರಂದು ಮುಗಿದಿದೆ. ಇವರ ಪರವಾನಗಿಯನ್ನು 1-4-95ರ ನಂತರ ನವೀಕರಿಸುವುದಿಲ್ಲ ಮತ್ತು ಹೋಟೆಲ್‌ಗಳನ್ನು ಮುಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ : ಸೂರತ್ಕಲ್ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಒಳಚಂಡಿಗಳ ವ್ಯವಸ್ಥೆಗೆ ಹಣ ಬಿಡುಗಡೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 755(1024 'ಎ')

ಶ್ರೀ ಕುಂಬ್ಳೆ ಸುಂದರ್‌ರಾವ್ (ಸೂರತ್ಕಲ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಒಳಚರಂಡಿ ವ್ಯವಸ್ಥೆಗಾಗಿ ಸರ್ಕಾರದವರು ಸೂರತ್ಕಲ್ ಮುನ್ಸಿಪಾಲಿಟಿಗೆ ಹಣವನ್ನು ಬಿಡುಗಡೆ ಮಾಡಿರುವರೆ, ಮಾಡಿದ್ದಲ್ಲಿ ಎಷ್ಟು: ಮಾಡಿಲ್ಲವಾದಲ್ಲಿ ಕಾರಣಗಳೇನು?

ಆ. ಒಳಚರಂಡಿ ವ್ಯವಸ್ಥೆಯನ್ನು ತುರ್ತಾಗಿ ಮಾಡಲು ಸರ್ಕಾರದವರು ಕಾರ್ಯ ಕ್ರಮಗಳೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ. ಸೂರತ್ಕಲ್ ಪಟ್ಟಣಕ್ಕೆ ಒಂದು ಒಳಚರಂಡಿ ಯೋಜನೆಯನ್ನು ರೂ.. 385.00 ಲಕ್ಷ ಅಂದಾಜಿನಲ್ಲಿ ರೂಪಿಸಲಾಗಿದ್ದು, ಪುರಸಭೆಯ ಪಾಲು ಶೇ.20ರಷ್ಟು, ರೂ 77.00 ಲಕ್ಷಗಳಾಗಿವೆ. ಪುರಸಭೆ ತನ್ನ ಪಾಲಿನ ವಂತಿಗೆಯನ್ನು ಪಾವತಿ ಮಾಡಿದ ನಂತರ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗುವುದು.